# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST | ಇದು ಸುದ್ದಿ ವಿಳಾಸ | ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.01 | Issue. 289 | Pages. 2 | Date: 09-10-2025, THURSDAY | RNI NO: KARKAN/2024/89601 | Kannada Daily

ಸಂಪುಟ : 01 – ಸಂಚಿಕೆ : 289 – ಪುಟಗಳು : 2 | 09-10-2025 ಗುರುವಾರ | Ph: 8762954248 | ದರ : ₹1


# ಇಂದಿನಿಂದ ಶಕ್ತಿ ದೇವತೆ ಹಾಸನಾಂಬ ವೈಭವ

## ಮಧ್ಯಾಹ್ನ 12.30ಕ್ಕೆ ಗರ್ಭಗುಡಿ ಓಪನ್ I ನಾಳೆಯಿಂದ ಸಾರ್ವಜನಿಕ ದರ್ಶನ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಶಕ್ತಿ ದೇವತೆ ಹಾಸನಾಂಬ ದರ್ಶನೋತ್ಸವದಲ್ಲಿ ಸಾಮಾನ್ಯ ಭಕ್ತರಿಗೆ ಅನುಕೂಲವಾಗುವಂತೆ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದ್ದು ಗಣ್ಯರು ಹಾಗೂ ಅತಿ ಗಣ್ಯರು ನಿಯಮ ಪಾಲಿಸುವ ಮೂಲಕ ಸಹಕರಿಸಬೇಕು ಎಂದು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಕೋರಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿ, ಗಣ್ಯರು, ಅತಿ ಗಣ್ಯರು ಬಂದಾಗ ಧರ್ಮ ದರ್ಶನ ಸಾಲಿನಲ್ಲಿ ಬರುವ ಭಕ್ತರಿಗೆ ತೊಂದರೆಯಾಗಬಾರದೆಂಬ ಕಾರಣಕ್ಕೆ ಸಮಯ ನಿಗದಿಪಡಿಸಲಾಗಿದೆ. ಸರ್ವರ ಹಿತಕ್ಕಾಗಿ ರೂಪಿಸಿರುವ ನಿಯಮಗಳನ್ನು ಎಲ್ಲರೂ ಪಾಲಿಸುವ ಮೂಲಕ ಮಹೋತ್ಸವ ಯಶಸ್ಸಿಗೆ ಸಹಕರಿಸಬೇಕು ಎಂದರು.

ಅ. 9ರ ಗುರುವಾರ ಮಧ್ಯಾಹ್ನ 12.30ಕ್ಕೆ ಸಲ್ಲುವ ಶುಭ ಮುಹೂರ್ತದಲ್ಲಿ ಗರ್ಭಗುಡಿ ಬಾಗಿಲು ತೆರೆಯಲಿದೆ. ಅ.23ರ ವರೆಗೆ ಜಾತ್ರೆ ನೆರವೇರಲಿದ್ದು ಮೊದಲ ಮತ್ತು ಕೊನೆಯ ದಿನ ಸಾರ್ವಜನಿಕ ದರ್ಶನಕ್ಕೆ ಅವಕಾಶ



ಇರುವುದಿಲ್ಲ. ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ, ಸಂಸದ ಶ್ರೇಯಸ್ ಪಟೇಲ್, ಶಾಸಕರಾದ ಕೆ.ಎಂ. ಶಿವಲಿಂಗೇಗೌಡ, ಹೆಚ್.ಪಿ. ಸ್ವರೂಪ್ ಸೇರಿ ಅಧಿಕಾರಿಗಳು ಭಾಗವಹಿಸಲಿದ್ದಾರೆ ಎಂದರು.

ಮೊದಲ ದಿನ ಸಾರ್ವಜನಿಕ ದರ್ಶನ ಇರುವುದಿಲ್ಲ. ಧರ್ಮದರ್ಶನದಲ್ಲಿ ದೇವಿಗೆ ನೈವೇದ್ಯ, ಮಹಾ ಮಂಗಳಾರತಿ ಸಮಯ ಹೊರತುಪಡಿಸಿ ದಿನಕ್ಕೆ 16 ರಿಂದ 20 ಗಂಟೆ ದರ್ಶನಕ್ಕೆ ಅವಕಾಶ ಕಲ್ಪಿಸಲಾಗುತ್ತದೆ. ಅರ್ಥಪೂರ್ಣ ಜಾತ್ರಾ ಮಹೋತ್ಸವಕ್ಕಾಗಿ ಜಿಲ್ಲಾಡಳಿತ ಅಗತ್ಯ ಕ್ರಮ ಕೈಗೊಂಡಿದ್ದು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಿದೆ.

ಪ್ರತಿ ವರ್ಷದಂತೆ ಈ ಬಾರಿಯೂ 1000 ರೂ., 300 ರೂ. ಟಿಕೆಟ್ ವ್ಯವಸ್ಥೆ ಇದೆ. ಈ ಮಾದರಿಯ ಟಿಕೆಟ್ ಪಡೆದವರು ಸುಲಭ ಹಾಗೂ ಶೀಘ್ರ ದರ್ಶನ ಪಡೆಯಬಹುದು. ಹಾಗೆಯೇ ಶಿಷ್ಟಾಚಾರ ದರ್ಶನ ಇರಲಿದೆ. ಗಣ್ಯರಿಗೆ ಗೋಲ್ಡ್ ಪಾಸ್ ವಿತರಿಸಲಿದ್ದು ಅವರು ಮಹಾನಗರ ಪಾಲಿಕೆ ಎದುರಿನ ಗೇಟ್ ನಿಂದ ಬರಬೇಕು. ಬೆಳಿಗ್ಗೆ 7 ರಿಂದ 10 ಗಂಟೆ ವರೆಗೆ ಮಾತ್ರ ಗಣ್ಯರನ್ನು ಬಿಡಲಾಗುವುದು. ಬೆಳಿಗ್ಗೆ 10.30 ರಿಂದ 12.30ರ ವರೆಗೆ ಅತಿ ಗಣ್ಯರಿಗೆ ಶಿಷ್ಟಾಚಾರದ ಪ್ರಕಾರ ದೇವಿ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ಮಾಜಿ ಪ್ರಧಾನಿ, ಸುಪ್ರೀಂ ಕೋರ್ಟ್ ನ್ಯಾಯಾಧೀಶರು, ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಹಾಗು ಪ್ರಮುಖ ಮಠಾಧೀಶರು ಈ ಸೌಲಭ್ಯ ಪಡೆಯಬಹುದು. ಆದರೆ ಒಬ್ಬರ ಜೊತೆ ನಾಲ್ವರಿಗೆ ಮಾತ್ರ ಪ್ರವೇಶವಿದ್ದು ಅದಕ್ಕೆ ಎಲ್ಲರೂ ಸಹಕಾರ ನೀಡಬೇಕು. ಜಿಲ್ಲಾಡಳಿತದಿಂದ 10 ವಾಹನಗಳ ನಿಯೋಜನೆ ಮಾಡಿದ್ದು ಪ್ರವಾಸಿ ಮಂದಿರದಿಂದ ಕರೆದೊಯ್ಯಲಾಗುವುದು. ಶಾಸಕರು, ಸಿನಿಮಾ ನಟರು ಸೇರಿದಂತೆ ಎಲ್ಲಾ ಗಣ್ಯರು ಜಿಲ್ಲಾಡಳಿತದ ನಿಯಮಗಳನ್ನು ಪಾಲಿಸುವ ಮೂಲಕ ಮಹೋತ್ಸವ ಯಶಸ್ಸಿಗೆ ಸಹಕರಿಸಬೇಕು. ಸಾಮಾನ್ಯ ಭಕ್ತರಿಗೆ ಅನುಕೂಲವಾಗುವ ಉದ್ದೇಶದಿಂದ ಅ. 21 ಹಾಗೂ 22ರಂದು ವಿಶೇಷ ಪಾಸ್‌ಗಳಿಗೆ ಅನುಮತಿ ಇರುವುದಿಲ್ಲವೆಂದು ಸ್ಪಷ್ಟಪಡಿಸಿದರು.

### ವಿಜ್ಞಾನ ಕಾಲೇಜು ಆವರಣದಲ್ಲಿ ಕಾರ್ಯಕ್ರಮ

ಸರ್ಕಾರಿ ವಿಜ್ಞಾನ ಕಾಲೇಜು ಆವರಣದಲ್ಲಿ ಅ. 9 ರಿಂದ 23ರ ವರೆಗೆ ವಿಶೇಷ ಫಲಪುಷ್ಪ ಪ್ರದರ್ಶನ ಏರ್ಪಡಿಸಲಾಗಿದೆ. ಬೆಳಿಗ್ಗೆ 9 ರಿಂದ ರಾತ್ರಿ 8.30ರ ತನಕ ಸಾರ್ವಜನಿಕರ ಪ್ರವೇಶ ಇರಲಿದೆ. ಅ. 19ರ ಬೆಳಿಗ್ಗೆ 11 ರಿಂದ ಸಂಜೆ 4ರ ವರೆಗೆ ಡಾಗ್ ಶೋ, ಅ. 12ರಂದು ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 2 ಗಂಟೆ ವರೆಗೆ ಪಾಕ ಸ್ಪರ್ಧೆ ಏರ್ಪಡಿಸಲಾಗಿದೆ ಎಂದರು.

ಜನದಟ್ಟಣೆ ಹಾಗೂ ವಾಹನ ದಟ್ಟಣೆ ನಿಯಂತ್ರಿಸಲು ಟ್ರಾಫಿಕ್ ರೂಟ್ ಮ್ಯಾಪ್ ಮತ್ತು ಹೆಚ್ಚುವರಿ ಪಾರ್ಕಿಂಗ್ ಸ್ಥಳಗಳನ್ನು ನಿಗದಿಪಡಿಸಲಾಗಿದೆ. ಅನಗತ್ಯ ಸಂಚಾರ ತಪ್ಪಿಸಲು ಪ್ರತ್ಯೇಕ ವೆಬ್‌ಸೈಟ್ ಸೃಜಿಸಿ ಎಲ್ಲಾ ಬಗೆಯ ನಿಯಮಗಳೊಂದಿಗೆ ಪಾರ್ಕಿಂಗ್ ಸ್ಥಳಗಳು ಹಾಗೂ ಭಕ್ತರು ದರ್ಶನದ ದ್ವಾರಗಳಿಗೆ ಪ್ರವೇಶ ಪಡೆಯಲು ಪೂರಕ ಸ್ಥಳಗಳ ಜಿಪಿಎಸ್ ಗೂಗಲ್ ರೂಟ್ ಮ್ಯಾಪ್ ಸೇರ್ಪಡೆ ಮಾಡಲಾಗಿದೆ. ಕೃತಕ ಬುದ್ಧಿಮತ್ತೆಗೆ ಪೂರಕ ಕ್ಯಾಮರಾಗಳನ್ನು ಅಳವಡಿಸಿ ತೊಂದರೆಯಾಗುವ ಸ್ಥಳಗಳನ್ನು ಪರಿಶೀಲಿಸಿ ಪರಿಹಾರ ಕ್ರಮಕ್ಕೆ ಮುತುವರ್ಜಿ ವಹಿಸಲಾಗಿದೆ. ವಿಶೇಷ ಚೇತನ ಹಾಗೂ 80 ವರ್ಷ ಮೇಲ್ಪಟ್ಟವರಿಗೆ ನೇರ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ಹಿಂದು ಧಾರ್ಮಿಕ ದತ್ತಿ ನಿಯಮದಂತೆ ವಸ್ತ್ರ ಸಂಹಿತೆ ಜಾರಿಗೊಳಿಸಿದ್ದು ಭಕ್ತರು ಭಾರತೀಯ ಉಡುಗೆ ಧರಿಸಿ ಬರಬೇಕೆಂದು ಜಿಲ್ಲಾಧಿಕಾರಿ ಮನವಿ ಮಾಡಿದರು.

### ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ

ಗುರುವಾರ ಸಂಜೆ 6 ಗಂಟೆಗೆ ಹೇಮಾವತಿ ಪ್ರತಿಮೆ ಬಳಿ ಜಾನಪದ ಜಾತ್ರಾ ಮಹೋತ್ಸವಕ್ಕೆ ಚಾಲನೆ ನೀಡಲಾಗುವುದು. ಅ. 10 ರಿಂದ 21ರ ವರೆಗೆ ಸುಭಾಷ್ ಚೌಕದ ಬಳಿ ಸಂಜೆ 6.30 ರಿಂದ 9.30ರ ವರೆಗೆ ಜಾನಪದ ನೃತ್ಯೋತ್ಸವ, ಸಿಲ್ವರ್ ಜ್ಯೂಬಿಲಿ ಪಾರ್ಕ್‌ನಲ್ಲಿ ವಿಶೇಷ ಫಲಪುಷ್ಪ ಪ್ರದರ್ಶನ ಇರಲಿದೆ. ಸಂಜೆ 7 ರಿಂದ 9ರ ವರೆಗೆ ಪ್ರತಿದಿನ ವಿವಿಧ ಕಾಲೇಜು ವಿದ್ಯಾರ್ಥಿಗಳಿಂದ ನೃತ್ಯೋತ್ಸವ ನೆರವೇರಲಿದೆ. ಅ. 10 ರಿಂದ 20ರ ವರೆಗೆ ಹಾಸನಾಂಬ ದೇವಾಲಯ ಆವರಣದಲ್ಲಿ ಸರದಿ ಸಾಲಿಗೆ ಹೊಂದಿಕೊಂಡತೆ ಭಜನೆ, ಲೈವ್ ಮ್ಯೂಸಿಕ್ ಇರಲಿದೆಯೆಂದು ಮಾಹಿತಿ ನೀಡಿದರು.

> ಅರ್ಥಪೂರ್ಣ ಹಾಸನಾಂಬ ಉತ್ಸವದ ಉದ್ದೇಶ ನಮ್ಮದಾಗಿದೆ. ಅದಕ್ಕೆ ಜಿಲ್ಲೆಯ ಜನರು ಸಹಕಾರ ನೀಡುತ್ತಾರೆ. ಧರ್ಮದರ್ಶನ ಸಾಲಿನಲ್ಲಿ ಬರುವ ಭಕ್ತರಿಗೆ ಅಗತ್ಯ ಸೌಲಭ್ಯ ಕಲ್ಪಿಸಲು ಕ್ರಮ ಕೈಗೊಳ್ಳಲಾಗಿದೆ.
>
> **– ಕೆ.ಎಸ್. ಲತಾಕುಮಾರಿ, ಜಿಲ್ಲಾಧಿಕಾರಿ**

# ಮೃತ ಮಕ್ಕಳ ಕುಟುಂಬಕ್ಕೆ ಪರಿಹಾರ: ಭರವಸೆ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ಕೃಷಿ ಹೊಂಡದಲ್ಲಿ ಆಕಸ್ಮಿಕವಾಗಿ ಮುಳುಗಿ ಮೃತಪಟ್ಟ ಮಕ್ಕಳ ಕುಟುಂಬಗಳಿಗೆ ಸರ್ಕಾರದಿಂದ ಸೂಕ್ತ ಪರಿಹಾರ ಕೊಡಿಸಲಾಗುವುದು ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ತಾಲ್ಲೂಕಿನ ಹಲಸುಲಿಗೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹೊಸೂರು ಗ್ರಾಮದಲ್ಲಿ ನೀರಿನಲ್ಲಿ ಮುಳುಗಿ ಮೃತಪಟ್ಟ ಬಾಲಕರ ಮನೆಗಳಿಗೆ ಭೇಟಿ ನೀಡಿ ವೈಯಕ್ತಿಕ ಪರಿಹಾರ ನೀಡಿ ಮಾತನಾಡಿ, ಬಾಲಕರು ಆಟವಾಡುವಾಗ ನೀರಿನಲ್ಲಿ ಮುಳುಗಿ ಮೃತಪಟ್ಟಿರುವುದು ಬೇಸರದ ಸಂಗತಿ. ಮಕ್ಕಳ ಪೋಷಕರು ಕೂಲಿ ಕಾರ್ಮಿಕರಾಗಿದ್ದು ಬಡವರಾಗಿದ್ದಾರೆ. ಈ ನಿಟ್ಟಿನಲ್ಲಿ ನಾನು ಇದನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ಸರ್ಕಾರ ಸೂಕ್ತ ಪರಿಹಾರ ಬಿಡುಗಡೆ ಮಾಡಬೇಕು ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಹಾಗೂ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅವರಿಗೆ ದೂರವಾಣಿ ಮುಖಾಂತರ ಮಾತನಾಡಿ ಸೂಕ್ತ ಪರಿಹಾರ ನೀಡಬೇಕೆಂದು ಮನವಿ ಮಾಡಿದರು. ಇದೆ ವೇಳೆ ಗ್ರಾಮಸ್ಥರು ಗ್ರಾಮದಲ್ಲಿರುವ ಅಂಗನವಾಡಿ ಶಿಕ್ಷಕಿಯ ವಿರುದ್ಧ ದೂರಿನ ಮಳೆಗೈದರು. ಸರಿಯಾದ ಸಮಯಕ್ಕೆ ಕರ್ತವ್ಯಕ್ಕೆ ಹಾಜರಾಗುವುದಿಲ್ಲ. ವಾರದಲ್ಲಿ ಮೂರು ನಾಲ್ಕು ದಿನ ಮಾತ್ರ ಅಂಗನವಾಡಿ ಬಾಗಿಲು ತೆರೆಯುತ್ತಾರೆ ಎಂದು ಶಾಸಕರಿಗೆ ತಿಳಿಸಿದರು. ಇದಕ್ಕೆ ಸ್ಪಂದಿಸಿದ ಶಾಸಕರು ಕೂಡಲೇ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಧರಣಿಕುಮಾರ್ ಅವರಿಗೆ ದೂರವಾಣಿ ಮೂಲಕ ಸಂಪರ್ಕಿಸಿ ಗ್ರಾಮಸ್ಥರ ದೂರಿಯನ್ವಯ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಇಂತಹ ದುರ್ಘಟನೆಗಳು ಮುಂದೆ ಸಂಭವಿಸದಂತೆ ವಿಧಾನಸಭಾ ಕ್ಷೇತ್ರದಲ್ಲಿರುವ ಖಾಸಗಿ ಹಾಗೂ ಸರ್ಕಾರಿ ಕೃಷಿಹೊಂಡಗಳ ಸುತ್ತ ಬೇಲಿ ನಿರ್ಮಿಸಿ ಗೇಟ್ ಅಳವಡಿಸುವಂತೆ ರೈತರು ಹಾಗೂ ಬೆಳೆಗಾರರಿಗೆ ಮನವಿ ಮಾಡಿದರು.

# ಸಿಜೆಐ ಮೇಲೆ ಶೂ ಎಸೆಯಲು ಯತ್ನಿಸಿದ ಆರೋಪಿ ಬಂಧನಕ್ಕೆ ಆಗ್ರಹ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಅವರ ಮೇಲೆ ಶೂ ಎಸೆಯಲು ಯತ್ನಿಸಿದ ಆರೋಪಿಯನ್ನು ಕೂಡಲೇ ಬಂಧಿಸಿ, ಕಠಿಣ ಶಿಕ್ಷೆಗೆ ಗುರಿಪಡಿಸುವಂತೆ ಆಗ್ರಹಿಸಿ ದಲಿತ ಸಂಘಟನೆ ಸಮನ್ವಯ ಸಮಿತಿಯಿಂದ ನಗರದಲ್ಲಿ ಬುಧವಾರ ಪ್ರತಿಭಟನೆ ನಡೆಸಲಾಯಿತು.

ಜಿಲ್ಲಾಧಿಕಾರಿ ಕಚೇರಿ ಎದುರಿನ ಅಂಬೇಡ್ಕರ್ ಪ್ರತಿಮೆ ಎದುರು ಜಮಾಯಿಸಿದ ನೂರಾರು ಪ್ರತಿಭಟನಾಕಾರರು, ಆರೋಪಿ ವಕೀಲ ಕಿಶೋರ್ ರಾಕೇಶ್ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ಹೊರ ಹಾಕಿದರು.

ಈ ವೇಳೆ ಮಾತನಾಡಿದ ಆರ್‌ಪಿಐ ರಾಜ್ಯಾಧ್ಯಕ್ಷ ಸತೀಶ್, ಬಿ.ಆರ್. ಗವಾಯಿ ಅವರು ಧಮ್ಮ ಮಾರ್ಗದಲ್ಲಿ ನಡೆಯುತ್ತಿರುವ ಡಾ.ಅಂಬೇಡ್ಕರ್ ಅವರ ಅನುಯಾಯಿಯಾಗಿದ್ದು, ಇದನ್ನು ಮನುವಾದಿ ಮನಸ್ಥಿತಿಯ ಜಾತಿವಾದಿಗಳಿಗೆ ಅರಗಿಸಿಕೊಳ್ಳಲು ಆಗದೆ ಅವರ ಮೇಲೆ ಶೂ ಎಸೆದಿದ್ದಾರೆ ಎಂದು ಕಿಡಿಕಾರಿದರು.

ವಕೀಲ ಕಿಶೋರ್ ರಾಕೇಶ್ ಶೂ ಎಸೆದಿರುವುದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಮೇಲೆ ಮಾತ್ರವಲ್ಲ, ಈ ಮೂಲಕ ಪರಮೋಚ್ಚ ದೇಶದ ಸಂವಿಧಾನ, ಪ್ರಜಾಪ್ರಭುತ್ವಕ್ಕೆ ಅವಮಾನ ಮಾಡಿದ್ದಾರೆ. ನ್ಯಾಯಮೂರ್ತಿ ಮೇಲೆ ಶೂ ಎಸೆಯಲು ದೇವರೇ ನನಗೆ ಪ್ರೇರಣೆ ನೀಡಿತು ಎಂದು ಆರೋಪಿ ಹೇಳಿದ್ದಾನೆ. ಅಂತಹ ದೇವರಿಗೂ ನಮ್ಮ ಧಿಕ್ಕಾರವಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕೂಡಲೇ ಆರೋಪಿ ವಿರುದ್ಧ ಸುಮೊಟೋ ಪ್ರಕರಣ ದಾಖಲಿಸಿ ಬಂಧಿಸಬೇಕು. ಇಲ್ಲದಿದ್ದರೆ ದಲಿತಪರ ಸಂಘಟನೆಗಳ ವತಿಯಿಂದ ದೇಶಾದ್ಯಂತ ಹೋರಾಟ ನಡೆಸಲಾಗುತ್ತದೆ ಎಂದು ಎಚ್ಚರಿಸಿದರು.

ದಲಿತ ಮುಖಂಡರಾದ ಕೃಷ್ಣದಾಸ್, ಅಂಬುಗ ಮಲ್ಲೇಶ್, ಸೋಮಶೇಖರ್, ವೀರೇಶ್, ಮಲ್ಲಿಗೆವಾಳು ದ್ಯಾವಪ್ಪ, ಶಿವಮ್ಮ ಮತ್ತಿತರರಿದ್ದರು.

# ತಂಬಾಕು ಹರಾಜು ಪ್ರಕ್ರಿಯೆಗೆ ಸಂಸದರ ಚಾಲನೆ



ಅರಕಲಗೂಡು: ತಾಲ್ಲೂಕಿನ ರಾಮನಾಥಪುರದ ತಂಬಾಕು ಹರಾಜು ಮಾರುಕಟ್ಟೆಯಲ್ಲೂ ದಹಿಸಿ ಗ್ರೇಡ್ ಮಾಡಿದ ತಂಬಾಕು ಮಾರಾಟ ಪ್ರಕ್ರಿಯೆ ಆರಂಭವಾಗಿದ್ದು, ಸಂಸದ ಶ್ರೇಯಸ್ ಎಂ.ಪಟೇಲ್ ಬುಧವಾರ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಇಂದಿನಿಂದ ತಂಬಾಕು ಹರಾಜು ಪ್ರಕ್ರಿಯೆ ಆರಂಭವಾಗಿದೆ. ನಮ್ಮ ರೈತರು ವರುಣನ ಅವಕೃಪೆ, ಹಲವು ರೋಗ-ರುಜಿನಗಳ ಬಾಧೆ ನಡುವೆಯೂ ಕಷ್ಟಪಟ್ಟು ತಂಬಾಕು ಬೆಳೆದು ಅದನ್ನು ಅಣಿಗೊಳಿಸಿ ಮಾರಾಟಕ್ಕೆ ತಂದಿದ್ದಾರೆ. ಅನ್ನದಾತರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕು. ಒಳ್ಳೆಯ ಬೆಲೆ ಕಲ್ಪಿಸುವ ಮೂಲಕ ಬೆಳೆಗಾರರಿಗೆ ನೆರವಾಗಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಮಾರುಕಟ್ಟೆಗೆ ಬರುವ ರೈತರಿಗೆ ಮೂಲಭೂತ ಸೌಕರ್ಯ ಕಲ್ಪಿಸಬೇಕು. ವಿಶ್ರಾಂತಿ ಕೊಠಡಿ, ಗುಣಮಟ್ಟದ ಆಹಾರ, ಕುಡಿಯುವ ನೀರು ಹಾಗೂ ಶೌಚಾಲಯ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಒದಗಿಸಿಕೊಡಲು ಮುತುವರ್ಜಿ ವಹಿಸಬೇಕು. ಇದೇ ವೇಳೆ ಆರೋಗ್ಯಯುತ ಆಹಾರ ತಯಾರಿಸುವ ಹೋಟೆಲ್‌ಗಳಿಗೆ ಮಾತ್ರ ತಂಬಾಕು ಮಂಡಳಿಯ ಎದುರು ಹೋಟೆಲ್ ತೆರೆಯುವಂತೆ ನಿರ್ದೇಶನ ನೀಡಿದರು.

ತಂಬಾಕು ಮಾರುಕಟ್ಟೆಯಲ್ಲಿ ದಲ್ಲಾಳಿಗಳ ಹಾವಳಿ ಹೆಚ್ಚಿದೆ ಎಂಬ ಅರೋಪ ಕೇಳಿ ಬರುತ್ತಿದ್ದು, ಅದಕ್ಕೆ ಅವಕಾಶ ಮಾಡಿಕೊಡಬಾರದು. ರೈತ ಸಂಘದ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಿ ಪರಿಹಾರ ಕ್ರಮ ಕೈಗೊಳ್ಳಬೇಕು ಎಂದು ತಂಬಾಕು ಮಂಡಳಿ ಸ್ಥಳೀಯ ಅಧೀಕ್ಷಕರಿಗೆ ಸೂಚನೆ ನೀಡಿದರು.

# ನ. 13 ರಿಂದ 3 ದಿನ ಸಿಐಟಿಯು ಜಿಲ್ಲಾ ಸಮ್ಮೇಳನ

ಹಾಸನ: ನಗರದ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ನ. 13 ರಿಂದ 15ರ ವರೆಗೆ ಸಿಐಟಿಯು 16ನೇ ರಾಜ್ಯ ಸಮ್ಮೇಳನ ನಡೆಯಲಿದೆ ಎಂದು ಸಮಿತಿ ಜಿಲ್ಲಾಧ್ಯಕ್ಷ ಧರ್ಮೇಶ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿ, ಸಮ್ಮೇಳನಕ್ಕೆ ರಾಜ್ಯದ ವಿವಿಧೆಡೆಗಳಿಂದ ಸಿಐಟಿಯುಗೆ ಸಂಯೋಜನೆಗೊಂಡಿರುವ ಕಾರ್ಮಿಕ ಸಂಘಗಳಿಂದ ಸುಮಾರು 450 ಪ್ರತಿನಿಧಿಗಳು ಹಾಗೂ ಸೌಹಾರ್ದ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ಸಮ್ಮೇಳನದಲ್ಲಿ ದುಡಿಯುವ ಜನರು ಮತ್ತು ಜನಸಾಮಾನ್ಯರ ಪ್ರಜಾಸತ್ತಾತ್ಮಕ ಹಕ್ಕುಗಳ ರಕ್ಷಣೆಗಾಗಿ ಮುಂದೆ ಮಾಡಬೇಕಾದ ಹೋರಾಟಗಳ ಕುರಿತು ಚರ್ಚಿಸಿ ನಿರ್ಣಯ ಕೈಗೊಳ್ಳಲಾಗುವುದು. ಕಡೆಯ ದಿನ ರ್‍ಯಾಲಿ ಮತ್ತು ಬಹಿರಂಗ ಸಭೆ ನಡೆಯಲಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸಮ್ಮೇಳನದ ಗೌರವಾಧ್ಯಕ್ಷ ಎಸ್.ಎನ್.ಪರಮಶಿವಯ್ಯ, ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಂ.ಬಿ.ಪುಷ್ಪ, ಜಿಲ್ಲಾ ಉಪಾಧ್ಯಕ್ಷ ಜಿ.ಪಿ.ಸತ್ಯನಾರಾಯಣ, ಖಜಾಂಚಿ ಅರವಿಂದ್ ಇದ್ದರು.

# ಇಬ್ಬರು ಪಿಎಸ್‌ಐಗಳ ವರ್ಗಾವಣೆ

ಹಾಸನ: ಜಿಲ್ಲೆಯ ಇಬ್ಬರು ಪಿಎಸ್‌ಐಗಳನ್ನು ವರ್ಗಾವಣೆ ಮಾಡಿ ದಕ್ಷಿಣ ವಲಯ ಪೊಲೀಸ್ ಮಹಾ ನಿರ್ದೇಶಕ ಡಾ. ಎಂ.ಬಿ. ಬೋರಲಿಂಗಯ್ಯ ಆದೇಶಿಸಿದ್ದಾರೆ.

ಹಾಸನ ಸಂಚಾರ ಪೊಲೀಸ್ ಠಾಣೆ 1ರಲ್ಲಿದ್ದ ಸಲ್ಮಾನ್ ಖಾನ್ ತಂಬೋಳಿ ಅವರನ್ನು ಸಕಲೇಶಪುರ ತಾಲ್ಲೂಕು ಯಸಳೂರು ಠಾಣೆಗೆ ಹಾಗೂ ಸ್ಥಳ ನಿರೀಕ್ಷೆಯಲ್ಲಿದ್ದ (ಜಿಲ್ಲಾ ಪೊಲೀಸ್ ಕಚೇರಿ)ಎಂ. ಶ್ರೀನಿವಾಸ್ ಅವರನ್ನು ಹಾಸನ ಸಂಚಾರ ಠಾಣೆಗೆ ವರ್ಗಾವಣೆ ಮಾಡಲಾಗಿದೆ.

# ಒಂದೂವರೆ ವರ್ಷದ ಬಾಲಕಿಯ ಅದ್ಭುತ ಸಾಧನೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ಅದ್ಭುತ ಜ್ಞಾಪಕ ಶಕ್ತಿಯ ಒಂದೂವರೆ ವರ್ಷದ ಮಗು ಇಂಡಿಯಾ ಬುಕ್ ಆಫ್ ರೆಕಾರ್ಡ್‌ನಲ್ಲಿ ಸ್ಥಾನ ಗಳಿಸಿ ಮೆಚ್ಚುಗೆಗೆ ಪಾತ್ರಳಾಗಿದ್ದಾಳೆ.

ಪಟ್ಟಣದ ಮಹೇಶ್ವರಿ ನಗರದ ತೌಸೀಫ್ ಮತ್ತು ಹಲೀಮಾ ಮಶ್ವತ್ ದಂಪತಿ ಪುತ್ರಿ ಮರಿಯಮ್ ಮೀಮ್ ವಿಶೇಷ ಸಾಧಕಿ. ಮರಿಯಮ್ ಮೀಮ್ ತೌಸೀಫ್ 10 ರಾಷ್ಟ್ರಗಳ ಧ್ವಜಗಳನ್ನು ಗುರುತಿಸಿ ಹೆಸರಿಸಬಲ್ಲಳು. ಜೊತೆಗೆ 13 ಪ್ರಾಣಿ, 16 ಪಕ್ಷಿ, 9 ಹೂವು, 5 ವಾಹನ, ಮನುಷ್ಯ ದೇಹದ 13 ಅಂಗಾಂಗ, 16 ತರಕಾರಿ ಮತ್ತು 14 ಹಣ್ಣುಗಳ ಹೆಸರನ್ನು ನಿಖರವಾಗಿ ಹೇಳುತ್ತಾಳೆ. 10 ವಿವಿಧ ವಸ್ತುಗಳ ಹೆಸರನ್ನು ಗುರುತಿಸಬಲ್ಲಳು. ಇಂಗ್ಲಿಷ್ ಅಕ್ಷರಮಾಲೆಯ ಪ್ರತಿ ಅಕ್ಷರಕ್ಕೆ ಸಂಬಂಧಿಸಿದ ಪದಗಳನ್ನು ಹೇಳುತ್ತಾಳೆ. ಒಂದರಿಂದ ಹತ್ತರ ವರೆಗೆ ಸಂಖ್ಯೆಗಳನ್ನು ಎಣಿಸಬಲ್ಲಳು ಮತ್ತು ಎರಡು ಇಂಗ್ಲಿಷ್ ನರ್ಸರಿ ಪದ್ಯಗಳನ್ನು ಸರಾಗವಾಗಿ ಪಠಿಸಬಲ್ಲಳು.

ಅವಳ ತೊದಲು ನುಡಿಯಲ್ಲೇ ಹರಿಯುವ ಚುರುಕಾದ ಮಾತು, ತೀಕ್ಷ್ಣ ಬುದ್ಧಿಶಕ್ತಿ ಮತ್ತು ಅದ್ಭುತ ಜ್ಞಾಪಕಶಕ್ತಿಯಿಂದ




ಎಲ್ಲರೂ ನಿಬ್ಬೆರಗಾಗಿದ್ದಾರೆ. ಕಿರಿಯ ವಯಸ್ಸಿನಲ್ಲೇ ರಾಷ್ಟ್ರಮಟ್ಟದ ಸಾಧನೆ ಮಾಡಿರುವ ಮರಿಯಮ್ ಮೀಮ್ ತೌಸೀಫ್ ಅವರನ್ನು ನೆರೆಹೊರೆಯವರು, ಬಂಧು-ಬಳಗ ಮತ್ತು ಶಿಕ್ಷಣ ಪ್ರೇಮಿಗಳು ಅಭಿನಂದಿಸಿದ್ದಾರೆ. ಈ ಕಾರಣಕ್ಕೆ ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್ ತಂಡವು ಮರಿಯಮ್ ಮೀಮ್‌ಗೆ ಪ್ರಶಸ್ತಿ ನೀಡಿದೆ.

# ಧರ್ಮಸ್ಥಳದ ಸಾಮಾಜಿಕ ಕೆಲಸಗಳಿಗೆ ಸರಿಸಾಟಿಯಿಲ್ಲ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಳೇಬೀಡು: ಲೆಕ್ಕವಿಲ್ಲದಷ್ಟು ಭಕ್ತರನ್ನು ಹೊಂದಿರುವ ಧರ್ಮಸ್ಥಳ ಸಾಗರದಂತೆ ಬೆಳೆದಿದೆ. ಧರ್ಮಸ್ಥಳ ಸಂಘದಿಂದ ನಡೆಯುವ ಸಾಮಾಜಿಕ ಕಾರ್ಯಗಳಿಗೆ ಬೆಲೆ ಕಟ್ಟಲು ಸಾಧ್ಯವಿಲ್ಲ ಎಂದು ಪುಷ್ಪಗಿರಿ ಮಠದ ಶ್ರೀ ಸೋಮಶೇಖರ ಸ್ವಾಮೀಜಿ ಹೇಳಿದರು.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್, ಹಳೇಬೀಡು ಗ್ರಾಮ ಪಂಚಾಯಿತಿ ಹಾಗೂ ಜಿಲ್ಲಾ ಅಖಿಲ ಕರ್ನಾಟಕ ಜನ ಜಾಗೃತಿ ವೇದಿಕೆ ವತಿಯಿಂದ ಬುಧವಾರ ಹಳೇಬೀಡಿನ ಬನಶಂಕರಿ ಕಲ್ಯಾಣ ಮಂಟಪದಲ್ಲಿ ನಡೆದ ಗಾಂಧಿ ಸ್ಮರಣೆ ಹಾಗೂ ದುಶ್ಚಟಗಳ ವಿರುದ್ಧ ಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡಿ, ಶೈಕ್ಷಣಿಕ, ಧಾರ್ಮಿಕ, ಸಾಮಾಜಿಕ ಹಾಗೂ ಜನಜೀವನ ಸುಗಮಗೊಳಿಸುವ ಹಾದಿಯಲ್ಲಿ ಹೆಗ್ಗಡೆಯವರ ಹೆಜ್ಜೆ ಸಾಗುತ್ತಿದೆ. ಆದರೂ ದ್ವೇಷ, ಅಸೂಯೆಯಿಂದ ಸಮಾಜದಲ್ಲಿ ಶಾಂತಿ ಕದಡುವ ಕೆಲಸ ಆಗುತ್ತಿದೆ. ಜನರು ಉತ್ತಮ ಕೆಲಸಗಳಿಗೆ ಪ್ರೋತ್ಸಾಹ ನೀಡಬೇಕು. ಉತ್ತಮ ಕೆಲಸ ಮಾಡುವವರಿಗೆ ಕಷ್ಟಗಳು ಎದುರಾಗುವುದು ಸಹಜ. ದುಷ್ಟ ಶಕ್ತಿಗಳು ದೇವತೆಗಳ ಉತ್ತಮ



ಕಾರ್ಯಕ್ಕೆ ಅಡ್ಡಿಪಡಿಸಿವೆ. ಆದರೂ ದೇವತೆಗಳಿಗೆ ಗೆಲುವಾಗಿದೆ ಎಂದು ಪುರಾಣ ಪುಣ್ಯ ಕಥೆಗಳು ಹೇಳುತ್ತವೆ. ಹೆಗ್ಗಡೆ ಅವರ ಶ್ರಮದಿಂದ ದುಶ್ಚಟ ಮುಕ್ತ, ವಿದ್ಯಾವಂತ, ಸ್ವಾವಲಂಬಿ ಸಮಾಜ ಕಾಣುತ್ತಿದ್ದೇವೆ. ಸಮಾಜದ ಉದ್ಧಾರಕ್ಕೆ ಹೆಗ್ಗಡೆ ಅವರು ಕೈಗೊಳ್ಳುವ ಕಾರ್ಯಕ್ಕೆ ಎಲ್ಲರೂ ಕೈಜೋಡಿಸಬೇಕು ಎಂದು ಸ್ವಾಮೀಜಿ ಹೇಳಿದರು. ದುಶ್ಚಟಗಳಿಂದ ಆರೋಗ್ಯ ಹಾಳಾಗುವುದಲ್ಲದೆ ಸಂಸಾರ ಸಹ ಬೀದಿಗೆ ಬರುವ ಸಾಧ್ಯತೆ ಇರುತ್ತದೆ. ಮಕ್ಕಳಲ್ಲಿ ಉತ್ತಮ ವ್ಯಕ್ತಿತ್ವ ರೂಪಿಸುವುದಕ್ಕೂ ಕಷ್ಟವಾಗುತ್ತದೆ. ದುಶ್ಚಟ ಮುಕ್ತ ಸಮಾಜದಿಂದ ಹಳ್ಳಿಗಳ ಉದ್ಧಾರ ಆಗುತ್ತದೆ ಎಂದು ಗಾಂಧೀಜಿ ಹೇಳಿದ್ದಾರೆ. ಹಳ್ಳಿಗಳ ಉದ್ಧಾರದಿಂದ ದೇಶದ ಪ್ರಗತಿ ಸಾಧ್ಯ ಎಂಬ ಅವರ ಮಾತನ್ನು ಜನರು ಸಾರ್ಥಕಗೊಳಿಸಬೇಕು ಎಂದರು.

# ರಾಮಾಯಣ ಮಹಾಕಾವ್ಯ ಜೀವನಕ್ಕೆ ಆದರ್ಶ: ಎಸಿ ರಾಜೇಶ್

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಸಕಲೇಶಪುರ: ವಾಲ್ಮೀಕಿಯವರ ಜೀವನ, ರಾಮಾಯಣ ಮತ್ತು ಮಹಾಭಾರತದಂತಹ ಮಹಾಕಾವ್ಯಗಳ ಬಗ್ಗೆ ತಿಳಿದುಕೊಳ್ಳುವುದು, ಗೌರವಿಸುವುದು ಹಾಗೂ ಅವರ ಆದರ್ಶಗಳನ್ನು ಮನೆಮಕ್ಕಳಿಗೆ ಪರಿಚಯಿಸುವುದು ಪ್ರತಿಯೊಬ್ಬ ಪೋಷಕರ ಕರ್ತವ್ಯ ಎಂದು ಉಪವಿಭಾಗಾಧಿಕಾರಿ ರಾಜೇಶ್ ಹೇಳಿದರು.

ಪಟ್ಟಣದ ಮಿನಿ ವಿಧಾನಸೌಧ ಆವರಣದಲ್ಲಿ ನಡೆದ ವಾಲ್ಮೀಕಿ ಜಯಂತಿಯಲ್ಲಿ ಮಾತನಾಡಿ, ವಾಲ್ಮೀಕಿಯವರ ಚಿಂತನೆಗಳು ಕಾಲಾತೀತವಾಗಿದ್ದು, ಅವರ ಜೀವನದಿಂದ ಪ್ರತಿಯೊಬ್ಬರೂ ಪ್ರೇರಣೆ ಪಡೆಯಬೇಕು. ಇಂದಿನ ಪೀಳಿಗೆಗೆ ಪುರಾಣಗಳು ಮತ್ತು ಮಹಾಕಾವ್ಯಗಳ ನಿಜವಾದ ಅರ್ಥವನ್ನು ತಿಳಿಸುವ ಜವಾಬ್ದಾರಿ ನಮ್ಮ ಮೇಲಿದೆ. ಮನೆ ಎನ್ನುವುದು ಮೊದಲ ಪಾಠಶಾಲೆ. ಮಕ್ಕಳಲ್ಲಿ ನೈತಿಕತೆ ಮತ್ತು ಸಂಸ್ಕಾರ ಬೆಳೆಸುವ ಕೆಲಸ ಮನೆಮಂದಿಯವರಿಂದಲೇ ಪ್ರಾರಂಭವಾಗಬೇಕು ಎಂದು ಹೇಳಿದರು.

ಸಮಾಜದಲ್ಲಿ ಹಿರಿಯರಿಗೆ ಗೌರವ ನೀಡದೆ, ಅಪಪ್ರಚಾರ ಮಾಡುವ ಪ್ರವೃತ್ತಿ ಹೆಚ್ಚುತ್ತಿರುವುದನ್ನು ಅವರು ವಿಷಾದಿಸಿದರು. ಆದರ್ಶ ವ್ಯಕ್ತಿಗಳ ಜೀವನ ಪಾಠಗಳಿಂದ ನಾವು ಪಡೆಯಬೇಕಾದದ್ದು ಆತ್ಮವಿಶ್ವಾಸ ಮತ್ತು ಸತ್ಯದ ಮಾರ್ಗ ಎಂದರು.

ಶಿಕ್ಷಕ ಅಣ್ಣಪ್ಪಸ್ವಾಮಿ ಮಾತನಾಡಿ, ವಾಲ್ಮೀಕಿಯಾಗಿ ರೂಪಾಂತರಗೊಂಡ ರತ್ನಾಕರನ ಕಥೆ ನೈತಿಕ ಬೋಧನೆಯ ಅತ್ಯುತ್ತಮ ಉದಾಹರಣೆ. ಪಾಪ-ಪುಣ್ಯದ ಅರಿವು ಇಲ್ಲದಾಗ ವ್ಯಕ್ತಿಯ ಜೀವನ ದಿಕ್ಕು ತಪ್ಪುತ್ತದೆ. ಆದರೆ ಕುಟುಂಬ ಮತ್ತು ಸಮಾಜ ನೀಡುವ ಮೌಲ್ಯಗಳು ಅವನನ್ನು ಹೊಸ ದಾರಿಯತ್ತ ಕರೆದೊಯ್ಯುತ್ತವೆ ಎಂದು ಹೇಳಿದರು.

ವಾಲ್ಮೀಕಿ ಆಶ್ರಮದಲ್ಲಿ ಬೆಳೆದ ಲವಕುಶರು ರಾಮಾಯಣದ ಮುಂದಿನ ಪೀಳಿಗೆಯ ಕೊಂಡಿಯಾಗಿದ್ದರು. ಇಂದಿನ ಮಕ್ಕಳಿಗೂ ವಾಲ್ಮೀಕಿಯವರ ತತ್ವದ ಅರಿವು ನೀಡಬೇಕು. ಪಾಪ, ಪುಣ್ಯ ಮತ್ತು ಕರ್ತವ್ಯದ ನಿಜ ಅರ್ಥವನ್ನು ತಿಳಿಸಿದಾಗ ಮಾತ್ರ ಸಮಾಜದಲ್ಲಿ ಮಾನವೀಯತೆ ಬೆಳೆಯುತ್ತದೆ ಎಂದರು.

ಪುರಸಭಾ ಅಧ್ಯಕ್ಷೆ ಜ್ಯೋತಿ ರಾಜಕುಮಾರ್, ಉಪಾಧ್ಯಕ್ಷೆ ಝರೀನಾ, ತಹಶೀಲ್ದಾರ್ ಸುಪ್ರೀತ, ಮುಖ್ಯಾಧಿಕಾರಿ ಮಹೇಶ್ವರಪ್ಪ, ಪುರಸಭಾ ಸದಸ್ಯೆಯರಾದ ವನಜಾಕ್ಷಿ ಮತ್ತು ಅನ್ನಪೂರ್ಣ, ಪುರಸಭಾ ಮಾಜಿ ಅಧ್ಯಕ್ಷೆ ಕೌಶಲ್ಯ ಲಕ್ಷ್ಮಣಗೌಡ ಇತರರಿದ್ದರು.

# ವಾಲ್ಮೀಕಿ ತತ್ವಾದರ್ಶ ಎಲ್ಲರಿಗೂ ಪ್ರೇರಣೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಅರಕಲಗೂಡು: ಮಹರ್ಷಿ ವಾಲ್ಮೀಕಿ ಆದರ್ಶಗಳು ನಮ್ಮೆಲ್ಲರಿಗೂ ಅನುಕರಣೀಯ ಎಂದು ತಹಶೀಲ್ದಾರ್ ಕೆ.ಸಿ. ಸೌಮ್ಯ ಹೇಳಿದರು.

ಪಟ್ಟಣದ ದೇವರಾಜು ಅರಸು ಭವನದಲ್ಲಿ ತಾಲ್ಲೂಕು ಆಡಳಿತದಿಂದ ಆಯೋಜಿಸಿದ್ದ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮಹರ್ಷಿ ವಾಲ್ಮೀಕಿ ಅವರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದು ನಮ್ಮ ಕರ್ತವ್ಯ ಎಂದು ಹೇಳಿದರು.

ಉಪನ್ಯಾಸಕ ಹರೀಶ್ ಮಾತನಾಡಿ, ಮಾನವ ಜೀವನಕ್ಕೆ ರಾಮಾಯಣವೇ ಆದರ್ಶ. ಮನುಷ್ಯನು ಹೇಗೆ ಬದುಕಬೇಕೆಂದು ರಾಮಾಯಣವನ್ನು ಆದರ್ಶವಾಗಿ ಇಟ್ಟುಕೊಂಡು ಬದುಕಿದಾಗ ಮಾತ್ರ ಜೀವನ ಸಾರ್ಥಕವಾಗುತ್ತದೆ. ವಾಲ್ಮೀಕಿಯವರನ್ನೂ ರಾಮಾಯಣದ ಶ್ರೀರಾಮಚಂದ್ರರನ್ನೂ ಸಮಾನವಾಗಿ ನೆನಪಿಸಬೇಕು ಎಂದು ಕುವೆಂಪು ಹೇಳುತ್ತಾರೆ. ಅಂಥ ಮಹಾನ್ ಗ್ರಂಥವನ್ನು ಬರೆಯುವುದು ಮಹಾಪುರುಷರಿಂದ ಮಾತ್ರ ಸಾಧ್ಯ. 24 ಸಾವಿರ ಶ್ಲೋಕಗಳನ್ನು ರಚಿಸಿದ ವಾಲ್ಮೀಕಿ ಮಹರ್ಷಿಯವರು ಮಹಾಪುರುಷರಾಗಿದ್ದರು ಎಂದರು.

ಕಾರ್ಯಕ್ರಮಕ್ಕೂ ಮುನ್ನ ತಾಲ್ಲೂಕು ಕಚೇರಿಯಿಂದ ಮಹರ್ಷಿ ವಾಲ್ಮೀಕಿಯವರ ಭಾವಚಿತ್ರದ ಮೆರವಣಿಗೆ ನಡೆಸಲಾಯಿತು.

ಪಪಂ ಅಧ್ಯಕ್ಷ ಪ್ರದೀಪ್ ಕುಮಾರ್, ತಾಪಂ ಇಒ ಶ್ರೀನಿವಾಸ್, ಸಮಾಜ ಕಲ್ಯಾಣಾಧಿಕಾರಿ ರವಿಕುಮಾರ್, ಗ್ರೇಡ್-2 ತಹಶೀಲ್ದಾರ್ ಸಿ. ಸ್ವಾಮಿ, ಉಪ ನೋಂದಣಾಧಿಕಾರಿ ಸೋಮಶೇಖರ್, ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ನಾಗೇಂದ್ರ ಕುಮಾರ್, ಮಾಜಿ ಅಧ್ಯಕ್ಷ ಹೂವಣ್ಣ ಹಾಗೂ ಸಮುದಾಯದ ಮುಖಂಡರಾದ ಬಸವ ನಾಯಕ್, ಸಿದ್ದರಾಜು ಇತರರಿದ್ದರು.

# ಸಿಜೆಐ ಮೇಲೆ ಶೂ ಎಸೆಯಲು ಯತ್ನ ಜನಪರ ಚಳವಳಿ ಒಕ್ಕೂಟ ಪ್ರತಿಭಟನೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ (ಸಿಜೈ) ಬಿ.ಆರ್. ಗವಾಯಿ ಅವರ ಮೇಲೆ ಶೂ ಎಸೆಯಲು ಯತ್ನಿಸಿದ ಘಟನೆ ಖಂಡಿಸಿ ನಗರದ ಡಾ. ಬಿ.ಆರ್. ಅಂಬೇಡ್ಕರ್ ಪ್ರತಿಮೆ ಎದುರು ಜಿಲ್ಲಾ ಜನಪರ ಚಳವಳಿಗಳ ಒಕ್ಕೂಟದಿಂದ ಪ್ರತಿಭಟನೆ ನಡೆಸಲಾಯಿತು.

ಸಿಐಟಿಯು ಜಿಲ್ಲಾಧ್ಯಕ್ಷ ಧರ್ಮೇಶ್ ಮಾತನಾಡಿ, ಸಿಜೆಐ ವಿರುದ್ಧ ನಡೆದಿರುವ ಕೃತ್ಯ ಸಂವಿಧಾನ ಹಾಗು ದೇಶಕ್ಕೆ ಅವಮಾನ. ಆರೋಪಿ ವಕೀಲ ರಾಕೇಶ್ ಕಿಶೋರ್ ಎಂಬಾತನನ್ನು ಬಂಧಿಸಿ ಕಾನೂನು ಕ್ರಮ ಜರುಗಿಸಬೇಕೆಂದು ಆಗ್ರಹಿಸಿದರು.

ದಲಿತ ಸಮುದಾಯಕ್ಕೆ ಸೇರಿದ ಬಿ.ಆರ್.ಗವಾಯಿ ಅವರು ಸಾಮಾಜಿಕ ಪ್ರತಿರೋಧಗಳನ್ನು ಎದುರಿಸಿ ಅರ್ಹತೆ ಮತ್ತು ಸಾಧನೆ ಮೂಲಕ ಉನ್ನತ ಸ್ಥಾನಕ್ಕೇರಿದ್ದಾರೆ. ಜಾತಿ ಮೂಲದ ಅಸಮಾನತೆ ಮತ್ತು ಅಸಹನೆ ಸಂವಿಧಾನ ಜಾರಿಗೆ ಬಂದ 75 ವರ್ಷಗಳ ನಂತರವೂ ಮನುವಾದಿಗಳ ಮನಸ್ಸಿನಲ್ಲಿ ನೆಲೆಯೂರಿದೆ ಎಂಬುದಕ್ಕೆ ಈ ಘಟನೆಯೇ ಸಾಕ್ಷಿ. ಆರೋಪಿ ಯಾವ ಪಶ್ಚಾತ್ತಾಪವೂ ಇಲ್ಲದೆ ಸಮರ್ಥನೆ ಮಾಡಿಕೊಳ್ಳುತ್ತಿರುವುದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಾರಕ ಎಂದರು.

ದಲಿತ ಸಂಘರ್ಷ ಸಮಿತಿ ರಾಜ್ಯಸಂಘಟನಾ ಸಂಚಾಲಕ ಈರೇಶ್ ಹಿರೇಹಳ್ಳಿ ಮಾತನಾಡಿ, ಬಿ.ಆರ್. ಗವಾಯಿ ಅವರು ಒಬ್ಬಂಟಿಯಲ್ಲ. ಪ್ರಜಾಪ್ರಭುತ್ವ ಮತ್ತು ಸಂವಿಧಾನದ ಮೇಲೆ ನಂಬಿಕೆ ಇಟ್ಟಿರುವ ಕೋಟ್ಯಂತರ ಜಾತ್ಯತೀತ ಮನಸ್ಸುಗಳು ಅವರ ಬೆಂಬಲಕ್ಕಿವೆ. ಸಿಜೆಐ ಯಾವ ಪಕ್ಷ ಇಲ್ಲವೇ ಧರ್ಮಕ್ಕೆ ಸೇರಿದವರಲ್ಲ. ಈ ದೃಷ್ಟಿಯಿಂದ ದೇಶದ ಎಲ್ಲಾ ಜಾತಿ, ಧರ್ಮ ಮತ್ತು ಪಕ್ಷಗಳ ಜನರು ಸುಪ್ರೀಂ ಕೋರ್ಟ್‌ನಲ್ಲಿ ನಡೆದಿರುವ ಘಟನೆಯನ್ನು ಖಂಡಿಸಬೇಕೆಂದು ಮನವಿ ಮಾಡಿದರು.

ದಲಿತ ಮುಖಂಡ ರಾಜಶೇಖರ್ ಹುಲಿಕಲ್, ಸಂವಿಧಾನ ಒಂದು ಅಭಿಯಾನದ ಸಂಚಾಲಕ ರಾಜು ಗೊರೂರು, ಕರ್ನಾಟಕ ರಾಜ್ಯ ಪ್ರಾಂತ ರೈತ ಸಂಘದ ಜಿಲ್ಲಾಧ್ಯಕ್ಷ ನವೀನ್ ಕುಮಾರ್, ಡಿವೈಎಫ್‌ಐ ಜಿಲ್ಲಾ ಕಾರ್ಯದರ್ಶಿ ಎಂ.ಜಿ.ಪೃಥ್ವಿ ಮಾತನಾಡಿದರು.

ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಂ.ಬಿ. ಪುಷ್ಪ, ದಸಂಸ ಮುಖಂಡರಾದ ಅಂಬುಗ ಮಲ್ಲೇಶ್, ದುಮ್ಮಿ ಕೃಷ್ಣ, ರಾಜು ಸಿಗರನಹಳ್ಳಿ, ಬಿ.ಎಸ್.ಲಿಂಗರಾಜು, ಪ್ರಸನ್ನ ಕುಮಾರ್ , ಎಸ್‌ಎಫ್‌ಐ ಜಿಲ್ಲಾ ಕಾರ್ಯದರ್ಶಿ ರಮೇಶ್, ಬೌದ್ಧ ಮಹಾಸಭಾದ ವೀರಭದ್ರಪ್ಪ, ಲಕ್ಕಪ್ಪ, ರಂಗಪ್ಪ ಹಾಗೂ ಇತರರಿದ್ದರು.

# ರೈಲ್ವೆ ಇಲಾಖೆ ಕಾಮಗಾರಿ ವಿರೋಧಿಸಿ ಪ್ರತಿಭಟನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ರೈಲ್ವೆ ಇಲಾಖೆಯಿಂದ ನಡೆಯುತ್ತಿರುವ ಕಾಮಗಾರಿಯಿಂದ ಭಾರೀ ತೊಂದರೆಯಾಗುತ್ತಿದೆಯೆಂದು ಆರೋಪಿಸಿ ಗವೇನಹಳ್ಳಿ, ರಾಜಘಟ್ಟ ಹಾಗೂ ಸುತ್ತಲಿನ ನಿವಾಸಿಗಳು ಪೃಥ್ವಿ ಚಿತ್ರಮಂದಿರ ಎದುರು ಪ್ರತಿಭಟನೆ ನಡೆಸಿದರು.

ರೈಲ್ವೆ ಇಲಾಖೆ ಕೈಗೊಂಡಿರುವ ಜಾಗದಲ್ಲಿ ಸಾರ್ವಜನಿಕರು ಓಡಾಡುತ್ತಾರೆ.

ಶಾಲಾ, ಕಾಲೇಜು ಮಕ್ಕಳು, ವ್ಯಾಪಾರಕ್ಕಾಗಿ ನಗರಕ್ಕೆ ತೆರಳುವವರು, ಕೃಷಿ ಕಾರ್ಮಿಕರು ಸಂಚರಿಸುವ ರಸ್ತೆಯನ್ನೇ ರೈಲ್ವೆ ಇಲಾಖೆ ಮುಚ್ಚಿಹಾಕಲು ಯತ್ನಿಸುತ್ತಿದೆ. ರಸ್ತೆ ಮಧ್ಯೆ ಗುಂಡಿ ತೆಗೆಯುವ ಕೆಲಸ ಆರಂಭಿಸಿದ್ದು ಖಂಡನೀಯ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಗವೇನಹಳ್ಳಿ ನಿವಾಸಿ ಹರೀಶ್ ಗೌಡ ಮಾತನಾಡಿ, ಈ ಭಾಗದಲ್ಲಿ ರೈಲ್ವೆ ಗೂಡ್ಸ್ ಶೆಡ್ ಇದ್ದು ನಿತ್ಯ ಕಿರಿಕಿರಿಯಾಗುತ್ತಿದೆ. ಮುಂದುವರಿದು ರೈಲ್ವೆ ಇಲಾಖೆಯವರು ಸಾರ್ವಜನಿಕರ ಸಂಚಾರಕ್ಕೆ ಅಡಚಣೆ ಮಾಡುವ ಕೆಲಸ ಮಾಡುತ್ತಿದ್ದಾರೆ. ರಸ್ತೆ ಅಗೆದು ಹಾಳು ಮಾಡುತ್ತಿದ್ದಾರೆ. ಅಧಿಕಾರಿಗಳು ಸ್ಥಳೀಯರ ಮೇಲೆ ದಬ್ಬಾಳಿಕೆ ನಡೆಸುತ್ತಿದ್ದಾರೆಂದು ಆರೋಪಿಸಿದರು.

ಕಾಮಗಾರಿ ಕೈಗೊಂಡಿರುವ ಜಾಗ ರೈಲ್ವೆ ಇಲಾಖೆಗೆ ಸೇರಿದ್ದಲ್ಲ.

ಅವರು ಈ ಪ್ರದೇಶವನ್ನು ಹಿಂದೆಯೇ ಮಹಾನಗರ ಪಾಲಿಕೆಗೆ ಬಿಟ್ಟುಕೊಟ್ಟಿದ್ದಾರೆ. ರೈಲ್ವೆ ಇಲಾಖೆ ತಕ್ಷಣ ಕೆಲಸ ನಿಲ್ಲಿಸಬೇಕೆಂದು ಒತ್ತಾಯಿಸಿದರು.

ಪಾಲಿಕೆ ಸದಸ್ಯ ರಕ್ಷಿತ್ ಮಾತನಾಡಿ, ರೈಲ್ವೆಯವರು ಸ್ಥಳೀಯರನ್ನು ಗುಲಾಮರಂತೆ ಕಾಣುತ್ತಾರೆ.

ಎಲ್ಲಾ ಜಾಗ ತಮ್ಮದೆಂದು ವಾದಿಸುತ್ತಾರೆ. ಜನ ಸಂಚಾರಕ್ಕೆ ನಿತ್ಯ ಅಡಚಣೆ ಮಾಡುತ್ತಾರೆ. ಈ ಪ್ರದೇಶ ನಗರ ಪಾಲಿಕೆಗೆ ಸೇರಿರುವುದರಿಂದ ರೈಲ್ವೆಯವರು ತಮ್ಮ ಗೂಡ್ಸ್ ಶೆಡ್ ನಿಂದ ವಾಹನಗಳನ್ನು ಬೇರೆ ಮಾರ್ಗಕ್ಕೆ ತಿರುಗಿಸಬೇಕೆಂದು ಆಗ್ರಹಿಸಿದರು.

ಕ್ಷೇತ್ರ ಶಾಸಕ ಹೆಚ್.ಪಿ. ಸ್ವರೂಪ್, ಸಂಸದ ಶ್ರೇಯಸ್ ಪಟೇಲ್ ಅವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದಾರೆ. ಆದರೂ ಅಧಿಕಾರಿಗಳು ಹಠ ಬಿಡುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

# ಹಾಸನಾಂಬ ದರ್ಶನ ಸುಗಮ ವ್ಯವಸ್ಥೆಗೆ ಸಚಿವರ ಸೂಚನೆ

ಹಾಸನ: ಹಾಸನಾಂಬ ದರ್ಶನ ಹಾಗೂ ಸಿದ್ದೇಶ್ವರ ಸ್ವಾಮಿ ಜಾತ್ರಾ ಮಹೋತ್ಸವಕ್ಕೆ ಆಗಮಿಸುವ ಭಕ್ತಾದಿಗಳಿಗೆ ತೊಂದರೆಯಾಗದಂತೆ ಸುಲಲಿತವಾಗಿ ದೇವಿ ದರ್ಶನ ಪಡೆದು ಹಿಂದಿರುಗಲು ಅಗತ್ಯ ಸಿದ್ಧತೆಗೆ ಕ್ರಮಕೈಗೊಳ್ಳುವಂತೆ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಹಾಸನಾಂಬ ದರ್ಶನ ಹಾಗೂ ಸಿದ್ದೇಶ್ವರಸ್ವಾಮಿ ಜಾತ್ರಾ ಮಹೋತ್ಸವ ಕುರಿತು ವಿಡಿಯೋ ಸಂವಾದದ ಮೂಲಕ ಮಾತನಾಡಿ, ಕಳೆದ ವರ್ಷ ಯಾವ ದಿನಗಳಂದು ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸಿದ್ದಾರೆ ಎಂಬುದನ್ನು ಅರಿತು ಜನದಟ್ಟಣೆ ನಿರ್ವಹಣೆ ಮಾಡಲು ಎಚ್ಚರವಹಿಸಿ ಎಂದು ತಿಳಿಸಿದರು.

ದೇವಿ ದರ್ಶನಕ್ಕೆ ಭಕ್ತಾದಿಗಳು ಸರತಿ ಸಾಲಿನಲ್ಲಿ ಸರಾಗವಾಗಿ ಸಾಗುವಂತೆ ಇದ್ದರೆ ಯಾವುದೇ ತೊಂದರೆ ಇಲ್ಲ, ಸ್ವಲ್ಪ ಹೆಚ್ಚು ಕಡಿಮೆಯಾದರೆ ಜನರು ತಾಳ್ಮೆ ಕಳೆದುಕೊಳ್ಳುತ್ತಾರೆ. ಈ ನಿಟ್ಟಿನಲ್ಲಿ ಅಧಿಕಾರಿಗಳು ಹೆಚ್ಚಿನ ನಿಗಾವಹಿಸಲು ನಿರ್ದೇಶನ ನೀಡಿದರು.

ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಕಲಾಸಕ್ತಿರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದರೆ ಯಶಸ್ಸು ಕಾಣಬಹುದು. ಪ್ರತಿದಿನದ ಸುಪ್ರಭಾತ ಕಾರ್ಯಕ್ರಮದಲ್ಲಿ ಸ್ಥಳೀಯ ಕಲಾವಿದರಿಗೆ ಅವಕಾಶ ಕಲ್ಪಿಸುವಂತೆ ತಿಳಿಸಿದರು.

ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಮಾತನಾಡಿ, ಜಾತ್ರೆ ಯಶಸ್ಸಗೆ ಎಲ್ಲಾ ಕ್ರಮ ಕೈಗೊಳ್ಳಲಾಗಿದೆ ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮ್ಮದ್ ಸುಜೀತಾ ಮಾತನಾಡಿ, ಬಂದೋಬಸ್ತ್‌ಗೆ ಕೈಗೊಂಡಿರುವ ಕ್ರಮಗಳ ಬಗ್ಗೆ ವಿವರಿಸಿದರು.

ಫಲಪುಷ್ಪ ಪ್ರದರ್ಶನಕ್ಕೆ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಆರ್. ಪೂರ್ಣಿಮಾ ತಿಳಿಸಿದರು.

ವಸ್ತು ಪ್ರದರ್ಶನ: ನಗರದ ಸಾಲಗಾಮೆ ರಸ್ತೆಯಲ್ಲಿರುವ ಸರ್ಕಾರಿ ವಿಜ್ಞಾನ ಕಾಲೇಜು ಆವರಣದಲ್ಲಿ 121 ಮಳಿಗೆ ಗಳನ್ನು ತೆರೆಯಲು ಕ್ರಮ ಕೈಗೊಳ್ಳಲಾಗಿದೆ, ಅದೇ ರೀತಿ ಪಾಕ ಸ್ಪರ್ಧೆ, 19 ರಂದು ಡಾಗ್ ಶೋ ಆಯೋಜಿಸ ಲಾಗಿದೆ ಎಂದು ಜಂಟಿ ಕೃಷಿ ನಿರ್ದೇಶಕ ರಮೇಶ್‌ಕುಮಾರ್ ಮಾಹಿತಿ ನೀಡಿದರು.

ಟೂರಿಂಗ್ ಪ್ಯಾಕೇಜ್: 12 ಪ್ಯಾಕೇಜ್ ಮಾಡಲಾಗಿದೆ. ಹೆಲಿ ಟೂರಿಸಂ ಗೆ ಸಿದ್ದತೆ ಮಾಡಿಕೊಳ್ಳಲಾಗಿದೆ ಎಂದು ಪ್ರವಾಸೋದ್ಯಮ ಇಲಾಖೆ ಅಧಿಕಾರಿ ಅರುಣ್‌ಕುಮಾರ್ ಸಂಗಾವಿ ಮಾಹಿತಿ ನೀಡಿದರು.

ನಗರದ ರಸ್ತೆ ಗುಂಡಿ ಮುಚ್ಚಲು ಕ್ರಮವಹಿಸಲಾಗಿದ್ದು,ಮಹಾನಗರ ಪಾಲಿಕೆಯಿಂದಲು ಗುಂಡಿ ಮುಚ್ಚಲು ಕ್ರಮವಹಿ ಸಿದ್ದಾರೆ ಎಂದು ಲೋಕೋಪ ಯೋಗಿ ಇಲಾಖೆ ಕಾರ್ಯಪಾ ಲಕ ಅಭಿಯಂತರರು ಗಿರೀಶ್ ತಿಳಿಸಿದರು.

ಉಪ ಅರಣ್ಯ ಸಂರಕ್ಷಣಾಧಿಕಾರಿ ಸೌರಬ್ ಕುಮಾರ್, ಅಪರ ಜಿಲ್ಲಾಧಿಕಾರಿ ಮಂಜುನಾಥ್,ಉಪ ವಿಭಾಗಾಧಿಕಾರಿಗಳಾದ ಮಾರುತಿ, ರಾಜೇಶ್ ಹಾಗೂ ವಿವಿಧ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು.

# ಆಹಾರ-ಕೃಷಿ ಮೇಳಕ್ಕಾಗಿ ಕ್ರೀಡಾಂಗಣ ಅದ್ವಾನ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಹಾಸನಾಂಬ ಜಾತ್ರಾ ಮಹೋತ್ಸವ ಅಂಗವಾಗಿ ಹಮ್ಮಿಕೊಂಡಿರುವ ಕೃಷಿ ಹಾಗೂ ಆಹಾರ ಮೇಳಕ್ಕಾಗಿ ನಗರದ ಏಕೈಕ ಹಸಿರು ಕ್ರೀಡಾಂಗಣವನ್ನು ಹಾಳು ಮಾಡಲಾಗುತ್ತಿದೆ ಎಂದು ಕ್ರೀಡಾಭಿಮಾನಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ನಗರದ ಸರ್ಕಾರಿ ವಿಜ್ಞಾನ ಕಾಲೇಜಿನ ಹಸಿರು ಕ್ರೀಡಾಂಗಣದಲ್ಲಿ ಬೃಹತ್ ಶಾಮಿಯಾನ ಹಾಕಿದ್ದು ಅದರಿಂದ ಮೈದಾನಕ್ಕೆ ಧಕ್ಕೆಯುಂಟಾಗಲಿದೆ. ಕಾರ್ಯಕ್ರಮ ನಡೆಸಲು ಬೇರೆ ಮೈದಾನಗಳಿದ್ದರೂ ಪರಿಗಣಿಸದೆ ಜಿಲ್ಲಾಡಳಿತದ ಹಠಮಾರಿತನ ಪ್ರದರ್ಶಿಸಿದೆಯೆಂದು ದೂರಿದ್ದಾರೆ.

ಕ್ರೀಡಾಂಗಣದಲ್ಲಿ ಟೆಂಟ್ ಅಳವಡಿಸಲಾಗಿದೆ. ಅದರಿಂದ ಮೈದಾನದಲ್ಲಿನ ಹಸಿರು ನೆಲಹಾಸು ಹಾಳಾಗುವ ಭೀತಿ ಕಾಡುತ್ತಿದೆ. ಸ್ಥಳಕ್ಕೆ ಮೇಳದ ಸಾಮಾಗ್ರಿ ತಲುಪಿಸಲು ದೊಡ್ಡ ವಾಹನಗಳು ಸಂಚರಿಸುತ್ತಿವೆ. ಪ್ರದರ್ಶನ ವೀಕ್ಷಣೆಗೆ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಬರುವುದರಿಂದ ಮೈದಾನದ ಸೌಂದರ್ಯ ಸಂಪೂರ್ಣ ಹಾಳಾಗಲಿದೆ ಎಂದು ಕಳವಳ ವ್ಯಕ್ತಪಡಿಸಿದ್ದಾರೆ.

# ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳ ಆಯೋಜನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ : ನಗರದ ಶ್ರೀ ಹಾಸನಾಂಬ ದೇವಿ ದರ್ಶನ ಮತ್ತು ಶ್ರೀ ಸಿದ್ದೇಶ್ವರ ಸ್ವಾಮಿ ಜಾತ್ರಾ ಮಹೋತ್ಸ ವವನ್ನು ಪ್ರತಿ ವರ್ಷ ಅತ್ಯಂತ ವಿಜೃಂಭಣೆಯಿಂದ ಆಯೋಜಿಸಲಾಗುತ್ತಿದ್ದು, ಸದರಿ ಜಾತ್ರಾ ಮಹೋತ್ಸ ವಕ್ಕೆ ಬೇರೆ ಬೇರೆ ರಾಜ್ಯ, ಜಿಲ್ಲೆಗಳಿಂದ ಭಕ್ತರು ಅಪಾರ ಸಂಖ್ಯೆಯಲ್ಲಿ ಭಾಗವಹಿಸುತ್ತಾರೆ. ಈ ನಿಟ್ಟಿನಲ್ಲಿ ಜಿಲ್ಲಾಡಳಿತ, ಹಾಸನ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯೊಂದಿಗೆ 2025ನೇ ಸಾಲಿನ ಶ್ರೀ ಹಾಸನಾಂಬ ದೇವಿ ದರ್ಶನ ಮತ್ತು ಶ್ರೀ ಸಿದ್ದೇಶ್ವರ ಸ್ವಾಮಿ ಜಾತ್ರಾ ಮಹೋತ್ಸ ವದ ಅಂಗವಾಗಿ ಅ.09 ರಿಂದ ಅ.21 ರವರೆಗೆ ಈ ಕೆಳಕಾಣಿಸಿದ ವೇದಿಕೆಗಳಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

ಅ.09 ರಂದು ಜಾನಪದ ಜಾತ್ರೆ ಸಂಜೆ 6.30 ಹೇಮಾವತಿ ಪ್ರತಿಮೆ ಎದುರು, ಅ.10 ರಿಂದ ಅ.21 ರವರೆಗೆ ದೇವಸ್ಥಾನದ ಹತ್ತಿರ ಹಾಸನಾಂಬ ವೇದಿಕೆ (ಲೈವ್ ಕನ್ಸ ರ್ಟ್) ಬೆಳಗ್ಗೆ 5.30 ರಿಂದ 7.30 ರವರೆಗೆ, ಬೆಳಗ್ಗೆ 10 ರಿಂದ 1 ರವರೆಗೆ, ಸಂಜೆ 7.30 ರಿಂದ 10 ರವರೆಗೆ, ದೇವಿಗೆರೆ ವೃತ್ತದ ಬಳಿ ಸುಭಾಷ್ ಚೌಕ (ಹೇಮಾವತಿ) ಬೆ.6.30 ರಿಂದ 9.30 ರವೆಗೆ, ಸಿಲ್ವರ್ ಜುಬ್ಲಿ ಪಾರ್ಕ್ ನಲ್ಲಿ ಸಂಜೆ 7 ರಿಂದ ರಿಂದ 9 ರವರೆಗೆ. ಸದರಿ ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

# ಇತಿಹಾಸದಲ್ಲಿ ಈ ದಿನ

## ಅಕ್ಟೋಬರ್-09

1962: ಉಗಾಂಡಾ ಬ್ರಿಟಿಷ್ ಆಳ್ವಿಕೆಗುಡಿ ಸ್ವಾತಂತ್ರ್ಯವನ್ನು ಪಡೆಯಿತು.

1970: ಕಂಬೋಡಿಯಾನಲ್ಲಿ ಶಾಹಿ ರದ್ದು ಮಾಡಿ ಓಜಇಳ್ಬಿ ಛಿಟ್ಠಚ್ಝಿ ಘೋಷಣೆ ಮಾಡಲಾಯಿತು.

2012: ಪಾಕಿಸ್ತಾನದಲ್ಲಿ ವಿದ್ಯಾಭ್ಯಾಸ ಹೋರಾಟಗಾರ್ತಿ ಮಲಾಲಾ ಯೂಸಫ್ ಜೈನ ಮೇಲೆ ಗುಂಡಾಗಿದ್ದು, ಅವಳು ಗಾಯಗೊಂಡಿದ್ದರೂ ಬದುಕಿ ಉಳಿದಳು.

1940: ವಿನ್‌ಸ್ಟನ್ ಚರ್ಚಿಲ್, ನೋವೆಲ್ಲ ಚೇಂಬರ್‌ಲೇನ್‌ನಿಂದ ನಿವೃತ್ತಿಯ ನಂತರ ಕಾನ್ಸರ್ವೇಟಿವ್ ಪಕ್ಷದ ನೂತನ ನಾಯಕನಾಗಿದ್ದರು.

### ಜನನ

1940: ಬ್ರಿಟಿಷ್ ಸಂಗೀತ ಲೋಕದ ಅಮರ ವ್ಯಕ್ತಿ ಜಾನ್ ಲೆನ್ನನ್, ಪ್ರಸಿದ್ಧ ಬೀಟಲ್ಸ್ ಬಳಗದ ಗಾಯಕ ಮತ್ತು ಸಂಗೀತ ಸಂಯೋಜಕ

1888: ರಷ್ಯಾದ ಕ್ರಾಂತಿಕಾರಿ ಹಾಗೂ ಚಿಂತಕ ನಿಕೊಲೈ ಬುಖಾರಿನ್

1953: ಅಮೆರಿಕದ ಪ್ರಸಿದ್ಧ ನಟ ಟೋನಿ ಶಲ್ಹೂಬ್ (ಧಾರಾವಾಹಿ ಖ್ಯಾತಿ)

1966: ಇಂಗ್ಲೆಂಡ್‌ನ ಮಾಜಿ ಪ್ರಧಾನಿ ಡೇವಿಡ್ ಕ್ಯಾಮೆರನ್

1970: ಸ್ವೀಡನ್‌ನ ಖ್ಯಾತ ಗಾಲ್ಫ್ ಆಟಗಾರ್ತಿ ಅನ್ನಿಕಾ ಸೋರೆನ್‌ಸ್ಟಾಮ್

### ಮರಣ

1967: ವಿಶ್ವ ಖ್ಯಾತ ಕ್ರಾಂತಿಕಾರಿ ಚೆ ಗುವೆರಾ, ಬೊಲೀವಿಯಾದಲ್ಲಿ ಹತ್ಯೆಗೀಡಾದರು

1974: ನಾಜಿ ಹಿಂಸೆಗಳಿಂದ ಸಾವಿರಾರು ಯೆಹೂದರನ್ನು ಉಳಿಸಿದ ಜರ್ಮನ್ ಉದ್ಯಮಿ ಆಸ್ಕರ್ ಶಿಂಡ್ಲರ್

1958: ಕ್ಯಾಥೋಲಿಕ್ ಚರ್ಚಿನ ಪೋಪ್ ಪೋಪ್ ಪಿಯಸ್

1978: ಬೆಲ್ಜಿಯಂ ಮೂಲದ ಗಾಯಕ ಮತ್ತು ಗೀತ ರಚಯಿತ ಜಾಕ್ ಬ್ರೆಲ್

1979: ಅಫ್ಘಾನಿಸ್ತಾನದ ರಾಜಕಾರಣಿ ಹಾಗೂ ಕ್ರಾಂತಿಕಾರಿ ನೂರ್ ಮೊಹಮ್ಮದ್ ತರಾಕಿ

# ವರ್ಷಕ್ಕೊಮ್ಮೆ ದರ್ಶನ ನೀಡುವ ಅಧಿದೇವತೆ ಹಾಸನಾಂಬ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನದ ಅಧಿದೇವತೆ ಹಾಸನಾಂಬ ನಾಡಿನ ಐತಿಹಾಸಿಕ ದೇವಾಲಯಗಳಲ್ಲಿ ಒಂದು. ಏಕೆಂದರೆ ಈ ದೇವಾಲಯ ಬಾಗಿಲು ತೆರೆಯುವುದು ವರ್ಷಕ್ಕೆ ಒಂದು ಬಾರಿ ಮಾತ್ರ. ಅದೂ ಕನಿಷ್ಟ 7 ದಿನ ಗರಿಷ್ಟ 15 ದಿನವಷ್ಟೇ ದೇವಿಯ ದರ್ಶನ ಭಾಗ್ಯ ಸಿಗುವುದು. ಇದು ಒಂದೆಡೆಯಾದರೆ, ಹಾಸನಾಂಬ ಪವಾಡ ಮೂರ್ತಿಯಾಗಿದ್ದು, ಬೇಡಿಕೊಂಡ ಇಷ್ಟಾರ್ಥವನ್ನು ಸಿದ್ಧಿಸಿಯೇ ತೀರುತ್ತಾಳೆ ಎಂಬ ಬಲವಾದ ನಂಬಿಕೆ ಇರುವುದರಿಂದ ಜಿಲ್ಲೆ ಮಾತ್ರವಲ್ಲದೇ ರಾಜ್ಯ ಹಾಗೂ ದೇಶದ ಒಳ-ಹೊರಗೂ ಹಾಸನಾಂಬ ಅಪಾರ ಭಕ್ತರಿದ್ದಾರೆ.

ಜನನಿ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರೀಯಸಿ. ಅಂದರೆ ತಾಯಿ ಹಾಗೂ ಜನ್ಮ ಭೂಮಿ ಇರುವೆಡೆ ಸ್ವರ್ಗವಿದೆ ಎಂದರ್ಥ. ದೇಶದಲ್ಲಿ ಕೋಟ್ಯಾನು ಕೋಟಿ ದೇವತೆಗಳಿದ್ದರೂ ನಾವು ಮಾತೃ ದೇವತೆಗೆ ಮೊದಲ ಗೌರವ ಸಲ್ಲಿಸುತ್ತಾ ಬಂದಿದ್ದೇವೆ. ಹಾಸನ ಜನರ ಪಾಲಿಗೆ ಹಾಸನಾಂಬ ಅಂಥದೇ ಸ್ಥಾನ ಅಲಂಕರಿಸಿದ್ದಾಳೆ ಎಂದು ಅನೇಕರು ಹೇಳುವುದುಂಟು. ಹಾಸನಾಂಬ ಅನುಪಮ ಶಕ್ತಿದೇವತೆ, ಸಪ್ತ ಮಾತೃಕೆಯರಲ್ಲಿ ಒಬ್ಬಳಾದ ದೇವಿ ಹಾಸನ ನಗರದ ಗ್ರಾಮ ದೇವತೆಯೂ ಹೌದು.

ಹಾಸನಾಂಬೆಯ ದೇಗುಲಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದ್ದು, 12ನೇ ಶತಮಾನದಲ್ಲಿ ಕೃಷ್ಣಪ್ಪ ನಾಯಕ ಎಂಬ ಪಾಳೇಗಾರ ಈ ದೇವಾಲಯ ನಿರ್ಮಿಸಿದ ಎಂಬ ಐತಿಹ್ಯವಿದೆ. ಹಿಂದೆ ಸುಣ್ಣದ ಗುಡಿಯಾಗಿದ್ದ ದೇವಾಲಯ, ಇತ್ತೀಚೆಗೆ ಪುನರ್ ನವೀಕರಣಗೊಂಡಿದೆ. ಆದರೆ ಗರ್ಭಗುಡಿ ಮಾತ್ರ ಆರಂಭದಲ್ಲಿ ಯಾವ ರೂಪದಲ್ಲಿತ್ತೋ ಹಾಗೆಯೇ ಇದೆ. ಅಲ್ಲಿ ಹಾಸನಾಂಬ ಹುತ್ತದ ರೂಪದಲ್ಲಿ ನೆಲೆಸಿದ್ದಾಳೆ. ಹಾಸನ ಜಿಲ್ಲೆಯ ಬೇಲೂರು, ಹಳೇಬೀಡು, ಶ್ರವಣಬೆಳಗೊಳದಂತೆ ವಿಶ್ವ ಪ್ರಸಿದ್ಧ ಸುಂದರ ಶಿಲ್ಪ ಕಲೆಯ ನವಿರಾದ ಕೆತ್ತನೆ ಇಲ್ಲಿಲ್ಲವಾದರು, ದೇವಿಯ ಪವಾಡದಿಂದಾಗಿ ಅಮ್ಮನ ಆರಾಧಕರು ಅಪಾರ ಸಂಖ್ಯೆಯಲ್ಲಿದ್ದಾರೆ ಎಂಬುದು ಜನ ಜನಿತ.

### ದೇಗುಲ ನಿರ್ಮಾಣವಾಗಿದ್ದು ಯಾವಾಗ





ಹಾಸನಾಂಬ ದೇವಾಲಯವನ್ನು ಕ್ರಿ.ಶ. 12ನೇ ಶತಮಾನದಲ್ಲಿ ಕೃಷ್ಣಪ್ಪ ನಾಯಕ ಪಾಳೆಗಾರ ದೇವಾಲಯ ಕಟ್ಟಿಸಿದ ಎಂಬ ಬಗ್ಗೆ ಹಾಸನ ತಾಲ್ಲೂಕಿನ ಕುದರಗುಂಡಿ ಗ್ರಾಮದಲ್ಲಿರುವ ಕ್ರಿ.ಶ.1140ರ ಶಿಲಾ ಶಾಸನದಲ್ಲಿ ಉಲ್ಲೇಖವಿದೆ.

ಸ್ಥಳ ಪುರಾಣದ ಪ್ರಕಾರ ಸಪ್ತಮಾತೃಕೆಯರಾದ ವೈಷ್ಣವಿ, ಇಂದ್ರಾಣಿ, ಮಹೇಶ್ವರಿ, ಕೌಮಾರಿ, ಬ್ರಾಹ್ಮಿದೇವಿ, ವರಾಹಿ ಮತ್ತು ಚಾಮುಂಡಿ ದೇವಿಯರು ಕಾಶಿಯಿಂದ ದಕ್ಷಿಣದ ಕಡೆಗೆ ವಾಯು ವಿಹಾರಕ್ಕಾಗಿ ತೆರಳಿದ್ದಾಗ ಹಾಸನದ ಪ್ರಕೃತಿ ಸೌಂದರ್ಯಕ್ಕೆ ಮನಸೋತು ಇಲ್ಲಿಯೇ ನೆಲೆಸಲು ನಿರ್ಧರಿಸಿದರಂತೆ. ಸಪ್ತಮಾತೃಕೆಯರಲ್ಲಿ ವೈಷ್ಣವಿ, ಮಹೇಶ್ವರಿ, ಕೌಮಾರಿ ಹಾಸನಾಂಬ ದೇಗುಲದಲ್ಲಿ ಹುತ್ತದ ರೂಪದಲ್ಲಿ ನೆಲೆಸಿದ್ದರೆ, ಬ್ರಾಹ್ಮಿದೇವಿ ಆಲೂರು ತಾಲ್ಲೂಕು ಕೆಂಚಮ್ಮನ ಹೊಸಕೋಟೆಯಲ್ಲೂ ಇಂದ್ರಾಣಿ, ವರಾಹಿ, ಮತ್ತು ಚಾಮುಂಡಿ ದೇವಿ ಹಾಸನ ನಗರ ಹೃದಯ ಭಾಗದಲ್ಲಿರುವ ದೇವಿಗೆರೆಯಲ್ಲಿ ನೆಲೆಸಿದರು ಎಂದು ಪೌರಾಣಿಕ ಮಾಹಿತಿಯಿಂದ ನಂಬಲಾಗಿದೆ.

ಇದೇ ಕಾರಣಕ್ಕೆ ಈ ಮೊದಲು ಸಿಂಹಾಸನಪುರಿ ಎಂದಿದ್ದ ಹಾಸನ, ಹಾಸನಾಂಬ ನೆಲೆಸಿದ ಹಾಸನ ಎಂದು ಹೆಸರಾಯಿತು ಎಂಬ ವಾದವೂ ಇದೆ. ಇಷ್ಟೇ ಅಲ್ಲ ಹುತ್ತದ ರೂಪದಲ್ಲಿರುವ ಹಾಸನಾಂಬೆ ವಿಗ್ರಹದ ಎದುರು ಒಂದು ಪುಟ್ಟ ಕಲ್ಲಿದೆ. ಅದನ್ನು ಸೊಸೆ ಕಲ್ಲು ಎನ್ನುತ್ತಾರೆ. ಅದರ ಹಿನ್ನೆಲೆ ಏನೆಂದರೆ ನಿತ್ಯ ಸೊಸೆಗೆ ಕಿರುಕುಳ ನೀಡುತ್ತಿದ್ದ ಅತ್ತೆ, ಒಂದು ದಿನ ಸೊಸೆಯನ್ನು ಹಿಂಬಾಲಿಸಿ ಬಂದಳಂತೆ. ಆಗ ಸೊಸೆ ದೇವಿಯ ಧ್ಯಾನದಲ್ಲಿ ಮಗ್ನಳಾಗಿದ್ದನ್ನು ಕಂಡು ಸಿಟ್ಟಾದ ಅತ್ತೆ ಪಕ್ಕದಲ್ಲಿದ್ದ ಚಂದ್ರ ಬಟ್ಟಲಿಂದ ಸೊಸೆ ತಲೆಗೆ ಕುಕ್ಕಿದಳಂತೆ. ಆ ನೋವಿನಿಂದ ಅಮ್ಮಾ ಎಂದು ಕೂಗಿದ ಸೊಸೆಯ ಆರ್ತನಾದ ಕೇಳಿದ ಕರುಣಾಮಯಿ ಹಾಸನಾಂಬ, ಸೊಸೆಯ ಭಕ್ತಿಗೆ ಮೆಚ್ಚಿ ಯಾವಾಗಲೂ ನೀನು ನನ್ನ ಸನ್ನಿಧಾನದಲ್ಲೇ ನೆಲೆಸು ಎಂದ ನಂತರ ಸೊಸೆ ಅಲ್ಲೇ ಕಲ್ಲಾದಳಂತೆ. ಪ್ರತೀ ವರ್ಷ ಒಂದು ಭತ್ತದ ಕಾಳಿನ ಮೊನೆಯಷ್ಟು ಸೊಸೆಕಲ್ಲು ದೇವಿಯ ವಿಗ್ರಹದ ಕಡೆ ಚಲಿಸುತ್ತದೆ. ಅದು ದೇವಿ ಪಾದ ಸ್ಪರ್ಶಿಸಿದ ಕ್ಷಣವೇ ಕಲಿಯುಗ ಅಂತ್ಯ ಎನ್ನುವ ಐತಿಹ್ಯವಿದೆ.

ಈ ಎಲ್ಲಾ ಕಾರಣಗಳಿಂದ ಶತಮಾನಗಳಿಂದಲೂ ದೇವಿಯ ಮಹಿಮೆ ಅಪಾರ. ಪ್ರತಿ ವರ್ಷ ಆಶ್ವೀಜ ಮಾಸದ ಮೊದಲ ಗುರುವಾರ ದೇವಿಯ ಬಾಗಿಲು ತೆರೆದು, ಬಲಿಪಾಡ್ಯಮಿಯ ಮಾರನೇ ದಿನ ದೇವಾಲಯದ ಬಾಗಿಲು ಮುಚ್ಚುವ ಸಂಪ್ರದಾಯ ಸಾವಿರಾರು ವರ್ಷಗಳಿಂದಲೂ ಆನೂಚಾನವಾಗಿ ನಡೆದುಕೊಂಡು ಬಂದಿದೆ. ಈ ಬಾರಿಯೂ ಬರುವ ಅಕ್ಟೋಬರ್ 9 ರಿಂದ 23ರ ವರೆಗೆ ಹಾಸನಾಂಬೆ ದರ್ಶನಾಭಾಗ್ಯ ಕರುಣಿಸಲಿದ್ದಾಳೆ.

ದೇವಿಯ ವೈಶಿಷ್ಟ್ಯ ಎಂದರೆ ಗರ್ಭಗುಡಿಯ ಬಾಗಿಲು ಮುಚ್ಚುವಾಗ ಹಾಸನಾಂಬ ಎದುರು ಇಟ್ಟ ನೈವೇದ್ಯ ಹಳಸೋದಿಲ್ಲ. ಹಚ್ಚಿಟ್ಟ ಹಣತೆ ಆರುವುದಿಲ್ಲ. ಹಾಗೆಯೇ ಇಟ್ಟ ಹೂ ಬಾಡುವುದಿಲ್ಲ ಎಂಬ ನಂಬಿಕೆ ಹಿಂದಿನಿಂದಲೂ ಜನ ಮಾನಸದಲ್ಲಿ ಅಚ್ಚೊತ್ತಿರುವುದರಿಂದ ಹಾಸನಾಂಬ ಎಂದರೆ ಅಪಾರ ಮಂದಿಗೆ ಈಗಲೂ ಅಪಾರ ಭಕ್ತಿ-ಗೌರವ. ಇದೇ ಕಾರಣಕ್ಕೆ ಪ್ರತಿವರ್ಷ ದೇವಾಲಯದ ಬಾಗಿಲು ತೆರೆದಾಗಲೂ ಹಗಲು-ರಾತ್ರಿ, ಮಳೆ-ಬಿಸಿಲು ಎನ್ನದೇ ಲಕ್ಷಾಂತರ ಭಕ್ತರು ತಂಡೋಪ ತಂಡವಾಗಿ ಬಂದು ಸರದಿ ಸಾಲಿನಲ್ಲಿ ನಿಂತು ದೇವಿಯ ದರ್ಶನ ಪಡೆದು ಹೋಗುತ್ತಾರೆ.

ಈ ಮೊದಲು ಜಿಲ್ಲೆಯ ಭಕ್ತರಷ್ಟೇ ದೇವಾಯಕ್ಕೆ ಬಂದು ಹೋಗುತ್ತಿದ್ದರು. ಕೆಲವು ವರ್ಷಗಳಿಂದ ರಾಜ್ಯ ಹಾಗೂ ನೆರೆಯ ರಾಜ್ಯ ಮಾತ್ರವಲ್ಲದೆ ವಿದೇಶದಿಂದಲೂ ಆಗಮಿಕರು ಬಂದು ಹೋಗುತ್ತಿದ್ದಾರೆ. ಹಾಸನಾಂಬೆಯ ದರ್ಶನೋತ್ಸ ವ ಸಹಜವಾಗಿಯೇ ದೇವಿಯನ್ನು ನಂಬಿರುವ ಅಪಾರ ಭಕ್ತವೃಂದಕ್ಕೆ ಖುಷಿಯ ವಿಷಯವೇ. ಆ ಸಂದರ್ಭಕ್ಕಾಗಿ ಎದುರು ನೋಡುತ್ತಿರುವವರು ಕಡಿಮೆ ಇಲ್ಲ. ಪ್ರತಿ ವರ್ಷ ದೇವಿಯ ಗರ್ಭಗುಡಿ ಬಾಗಿಲು ಹಾಕಿದ ನಂತರ ಅದರ ಕೀಲಿ ಕೈ ಜಿಲ್ಲಾಡಳಿತದ ಬಳಿಯೇ ಇರುತ್ತದೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248